



# ಒಳ್ಳೆಯ ಸ್ಕ್ರಿಪ್ಟ್‌ಗೆ ಜೀವ ತುಂಬಬೇಕು

## ಅದ್ವಿತಿ ಶೆಟ್ಟಿ

ಸ್ಟಾರ್ ಸುವರ್ಣದ 'ಎರಡು ಕನಸು'ನ ಸಹನಾ

★ *ನಿಮ್ಮ ಪಾತ್ರ ಸಹನಾ ಮೂರ್ತಿನಾ?*

ನನಗೂ ಸಾಕಷ್ಟು ನೋವುಗಳಿವೆ. ಎಲ್ಲೂ ನನ್ನ ನೋವುಗಳನ್ನು ತೋರಿಸಿಕೊಳ್ಳುವುದಿಲ್ಲ. ಎಲ್ಲರಿಗೂ ಒಳ್ಳೆಯದನ್ನೇ ಮಾಡುತ್ತೇನೆ. ಬಡ ಕುಟುಂಬದಲ್ಲಿ ಕಷ್ಟದಿಂದ ಬೆಳೆದಿದ್ದೇನೆ. ದೊಡ್ಡ ಶ್ರೀಮಂತರ ಮನೆಗೆ ಸೊಸೆಯಾಗಿ ಬಂದಿದ್ದೇನೆ. ನನ್ನ ಅಪ್ಪ ಒಬ್ಬ ಆಟೋ ಚಾಲಕ, ನನಗೆ ಮೆಡಿಕಲ್, ಅಕ್ಕನಿಗೆ ಎಂಬಿಎ ಓದಿಸಿದ್ದಾರೆ. ಮದುವೆ ಬದುಕಿನ ಬಹುಮುಖ್ಯ ತಿರುವು. ಹೀಗಿರುವಾಗ ನನಗೆ ಗೊತ್ತಿಲ್ಲದಂತೆ ಮಾಂಗಲ್ಯಧಾರಣೆಯಾಗಿದೆ. ದೊಡ್ಡಮನೆತನ ಹಾಗೆಂದು ಅಲ್ಲಿ ಸಣ್ಣತನ ಇಲ್ಲ ಎಂದಿಲ್ಲ. ಅಲ್ಲಿನ ತಾಪತ್ರಯಗಳಿಗೆ ನನ್ನ ಶಿಕ್ಷಣ ಹೇಗೆ ನೆರವಿಗೆ ಬರುತ್ತದೆ ಎನ್ನುವುದನ್ನು ಕಥೆ ಹೇಳುತ್ತದೆ. ಆ ಮೂಲಕ ಶಿಕ್ಷಣದ ಮಹತ್ವ ಹಾಗೂ ಸಹನೆಯ ಪ್ರಾಮುಖ್ಯತೆ ಎಷ್ಟಿದೆ ಎನ್ನುವುದು ಕಥೆ. ಸದ್ಯ ಅದು ಕವಲೊಡೆದಿದೆ.

★ *ಮೊದಲ ದಿನ ಬಣ್ಣ ಹಚ್ಚಿದ ಅನುಭವ ಹೇಗಿತ್ತು?*

ಆದಿನ ಎಂದೂ ಮರೆಯಲಾಗದು. ಯಾವತ್ತೂ ನಾನು ನಟಿಯಾಗಬೇಕು ಎಂದುಕೊಂಡವಳಲ್ಲ. ಬೆಂಗಳೂರಿಗೆ ಎಚ್‌ಆರ್ ವ್ಯವಸ್ಥಾಪಕಿ ಆಗಲು ಬಂದಿದ್ದೆ. ಕಾಲೇಜು ದಿನಗಳಲ್ಲಿ ಭರತನಾಟ್ಯವನ್ನು ಅಭ್ಯಾಸ ಮಾಡಿದ್ದೆ. ಅದರ ಪ್ರಭಾವದಿಂದ ಐದಾರು ರಿಯಾಲಿಟಿ ಶೋಗಳನ್ನು ಮಾಡಿದೆ. ಝೀ ಕನ್ನಡದ 'ಡಾನ್ಸ್‌ಕರ್ನಾಟಕ ಡಾನ್ಸ್'ನಿಂದ ಹಿಡಿದು ತೆಲುಗು, ಹಿಂದಿ ವಾಹಿನಿಗಳಲ್ಲಿ ಡಾನ್ಸ್ ಸಂಬಂಧಿತ ಕಾರ್ಯಕ್ರಮ ನೀಡಿದೆ. ಅದಾದ ಮೇಲೆ ಮಾಡೆಲಿಂಗ್ ಆರಂಭಿಸಿದೆ.

ನನಗೆ ತಂಗಿ ಇದ್ದಾಳೆ. ಆಕೆಯ ಹೆಸರು ಅಶ್ವಿತಿ ಶೆಟ್ಟಿ. ನಮಗೆ 'ಮಿಸ್ಟರ್ ಅಂಡ್ ಮಿಸ್ಸೆಸ್ ರಾಮಾಚಾರಿ' ಸಿನಿಮಾಕ್ಕೆ ಅವಳಿ ಪಾತ್ರಗಳ ನಿರ್ವಹಣೆಗೆ ಅವಕಾಶ ಬಂತು. ಕ್ಯಾಮೆರಾ, ಸ್ಕ್ರಿಪ್ಟ್ ಏನೂ ಗೊತ್ತಿಲ್ಲದ ನನಗೆ ಬೆಂಗಳೂರಿನ ಮಲ್ಲೇಶ್ವರ ಕ್ರೀಡಾಂಗಣದಲ್ಲಿ ಮೊದಲ ದಿನ ಚಿತ್ರೀಕರಣ ಇತ್ತು. ಸೆಟ್‌ನಲ್ಲಿ ನೇರವಾಗಿ ಕ್ಯಾಮೆರಾ ಎದುರಿಸಿದೆ. ನಾಯಕ ನಟ ಯಶ್ ಸೇರಿದಂತೆ ಎಲ್ಲರೂ ಚಪ್ಪಾಳೆ ಹೊಡೆದು ಬೆಂಬಲಿಸಿದರು. ಒಂದೇ ಶಾಟ್‌ಗೆ ಓಕೆ ಆಗಿತ್ತು. ಅದಾದ ಮೇಲೆ ಪ್ರಣಯರಾಜ ಶ್ರೀನಾಥ್ ಅವರ 'ಸುಳಿ'ಯಲ್ಲಿ, ಈಗ 'ಗಿರಿಗಟ್ಲೆ'ಯಲ್ಲಿ ನಟಿಸುತ್ತಿದ್ದೇನೆ. ಈಗ 'ಎರಡು ಕನಸು' ಮೂಲಕ ಅಭಿನಯವನ್ನು ಕಲಿಯುತ್ತಿದ್ದೇನೆ. ಮುಂದೆ ಒಳ್ಳೆಯ ಸ್ಕ್ರಿಪ್ಟ್‌ಗೆ ನನ್ನ ನಟನೆ ಜೀವ ತುಂಬಬೇಕು ಎನ್ನುವ ಬಯಕೆ ಇದೆ.

★ *ನಿಮ್ಮ ದೃಷ್ಟಿಯಲ್ಲಿ ನಟನೆ ಅಂದರೆ ಏನು?*

ವೈಯಕ್ತಿವಾಗಿ ನನಗೆ ಪ್ಯಾಶನ್. ನಟನೆ ಅನ್ನುವುದು ನಿರಂತರ ಕಲಿಯುವ ಪ್ರಕ್ರಿಯೆ. ಜೊತೆಗೆ ಸಾರ್ಥಕ ಭಾವವನ್ನೂ ಮೂಡಿಸುವಂತಹದ್ದು. ನಮ್ಮ ಬಾಲ್ಯದ ದಿನಗಳಲ್ಲಿಯೇ ದೊಡ್ಡ ಸ್ಟಾರ್‌ಗಳಾಗಿ ಮಿಂಚಿದವರ ಜೊತೆ ಒಡನಾಡಲು ಇಲ್ಲಿ ಸಾಧ್ಯವಾಗುತ್ತದೆ. ನಮ್ಮ ಧಾರಾವಾಹಿಗೆ ಹಿರಿಯ ನಟರಾದ ಜಯಂತಿ ಮತ್ತು ಚಂದ್ರಶೇಖರ್ ಆಗಮಿಸಿದ್ದರು. ಅವರ ಜೊತೆ ಒಂದು ದಿನ ಕಳೆದಿದ್ದು ತುಂಬಾ ಖುಷಿಯನ್ನು ಉಂಟು ಮಾಡಿದೆ.

★ *ನಿಮ್ಮ ಫ್ಯಾಷನ್ ಬಗ್ಗೆ ಹೇಳುವುದಾದರೆ...*

ಫ್ಯಾಷನ್ ನನ್ನ ಆಸಕ್ತಿಯ ಕ್ಷೇತ್ರ. ಸಾಮಾಜಿಕ ಮಾಧ್ಯಮಗಳಲ್ಲಿ ನನ್ನನ್ನು ಹಲವರು ಅನುಕರಿಸುತ್ತಾರೆ. ಯಾವುದಾದರೂ ಡಿಸೈನ್ ಹೊಸತು ಅನ್ನಿಸಿದರೆ ಆ ಬಗ್ಗೆ ವಿಚಾರಿಸುತ್ತಾರೆ. ಕೆಲವೊಂದನ್ನು ನಾನೇ ಡಿಸೈನ್ ಮಾಡುತ್ತೇನೆ. ನನ್ನ ದೃಷ್ಟಿಯಲ್ಲಿ ಫ್ಯಾಷನ್ ಅನ್ನುವುದು ನಮಗೆ ಅನುಕೂಲವೂ, ಒಪ್ಪುವಂತೆಯೂ ಇರಬೇಕು. ನನ್ನ ದೃಷ್ಟಿಯಲ್ಲಿ ಬ್ರಾಂಡ್ ಎನ್ನುವುದು ವೇಸ್ಟ್. ನಾನು ಯಾವುದೋ ಬೀದಿಯಲ್ಲಿ ಸುತ್ತುವಾಗ ಅಂಗಡಿಯೊಂದರ ಬಟ್ಟೆ ಇಷ್ಟ ಆದರೆ ಖರೀದಿಸುತ್ತೇನೆ. ಅದರ ಬೆಲೆ 150 ರೂಪಾಯಿಯೂ ಇರಬಹುದು. ಫ್ಯಾಷನ್‌ಗೆ ಅಧಿಕ ಹಣ ಖರ್ಚು ಮಾಡಬೇಕಿಲ್ಲ. ನಮಗೆ ಎಷ್ಟು ಚೆಂದ ಕಾಣುತ್ತೆ, ಬಟ್ಟೆಯ ಗುಣಮಟ್ಟ ಹೇಗಿದೆ ಎನ್ನುವುದನ್ನು ಅರಿಯಬೇಕು.

■ ರಾಘವೇಂದ್ರ